# ಭಾಷೆ ಮತ್ತು ಕಲೆಯ ಮಧ್ಯಪ್ರವೇಶಗಳು | ನಿಜಾಮುದ್ದೀನ್ ಮಾದರಿ

ಜ್ಯೋತ್ಸ್ನಾ ಲಾಲ್ ಮತ್ತು ಹೈದರ್ ಮೆಹ್ದಿ ರಿಜ್ವಿ

ಹಜರತ್ ನಿಜಾಮುದ್ದೀನ್ ಬಸ್ತಿಯು ಭಾರತದ ಬಹುತ್ವ ಸಂಪ್ರದಾಯಗಳ ನೆಲೆ. ಇಲ್ಲಿರುವ 13ನೇ ಶತಮಾನದ ಹೆಸರಾಂತ ಸೂಫಿ ಸಂತ, ಹಜರತ್ ನಿಜಾಮುದ್ದೀನ್ ಔಲಿಯಾ ಅವರ ಸಮಾಧಿಗೆ ಎಲ್ಲಾ ಮತ ಶ್ರದ್ಧೆಯ ಭಕ್ತರು ಭೇಟಿ ಕೊಡುತ್ತಾರೆ. 700 ವರ್ಷಗಳಷ್ಟು ಹಳೆಯದಾದ ಈ ಪ್ರದೇಶದಲ್ಲಿ 10 ಸಾವಿರಕ್ಕೂ ಹೆಚ್ಚು ಜನರು ನೆಲೆಸಿದ್ದು, ಶೇಕಡಾ 70ರಷ್ಟು ಮಂದಿ ಅಸಂಘಟಿತ ವಲಯಗಳಲ್ಲಿ ದುಡಿಯುತ್ತಾರೆ. ಅಗಾ ಖಾನ್ ಸಾಂಸ್ಕೃತಿಕ ಟ್ರಸ್ಟ್ ಮತ್ತು ಅಗಾ ಖಾನ್ ಪ್ರತಿಷ್ಠಾನದ ನಿಜಾಮುದ್ದೀನ್ ನಗರ ನವೀಕರಣ ಉಪಕ್ರಮವು ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಯೋಜನೆಯಾಗಿ, 2007ರಿಂದಲೂ ಅದು ನಿಜಾಮುದ್ದೀನ್ ಬಸ್ತಿ ಪ್ರದೇಶದ ಜನರ ಜೀವನದ ಗುಣಮಟ್ಟವನ್ನು ಪಾರಂಪರಿಕ ಸಂರಕ್ಷಣಾ ವಿಧಾನದ ಮೂಲಕ ಮೇಲೆತ್ತುವ ಗುರಿಯನ್ನು ಹೊಂದಿದೆ.

ಮಕ್ಕಳಿಗೆ ಸಿಗುತ್ತಿರುವ ಶಿಕ್ಷಣವು ಕಳಪೆ ಗುಣಮಟ್ಟದ್ದಾಗಿರುವುದು ಪ್ರಮುಖ ಸಮಸ್ಯೆಯಾಗಿ ಉಲ್ಬಣವಾಗುತ್ತಿರುವ ಹಿನ್ನೆಲೆಯಲ್ಲಿ, ಜೀವನ ಮಟ್ಟ ಸಮೀಕ್ಷಾ ವರದಿಯ ಆಧಾರದ ಮೇಲೆ, ಈ ಕಾರ್ಯಕ್ರಮವನ್ನು ವಿನ್ಯಾಸಗೊಳಸಲಾಗಿದೆ. ನಿಜಾಮುದ್ದೀನ್ ಬಸ್ತಿಯಲ್ಲಿ ಶೇಕಡಾ 98ರಷ್ಟು ಮುಸ್ಲಿಂ ಸಮುದಾಯವಿರುವ ಕಾರಣ ಇದೇನೂ ಅಚ್ಚರಿಯ ಸಂಗತಿಯಾಗಿಲ್ಲ ಹಾಗೂ 2006ರ ನವೆಂಬರ್ ತಿಂಗಳಲ್ಲಿ ಸಾಚಾರ್ ಸಮಿತಿ ನೀಡಿದ ವರದಿಯು, ವಿಶೇಷವಾಗಿ ಮಹಿಳೆಯರು ಮತ್ತು ಹೆಣ್ಣುಮಕ್ಕಳಲ್ಲಿ ಶಿಕ್ಷಣವು ಪ್ರಮುಖ ಸಮಸ್ಯೆಯಾಗಿದೆ ಎಂದು ಗುರುತಿಸಿದೆ. ನಿಜಾಮುದ್ದೀನ್ ಬಸ್ತಿಯಲ್ಲಿ ಈ ಸಮಸ್ಯೆಯ ಜೊತೆಗೆ ಸರ್ಕಾರಿ ಶಾಲೆಗೆ ಬರುವ ಬಹುತೇಕ ಮಕ್ಕಳು ಮೊದಲ ತಲೆಮಾರಿನವರಾಗಿರುವ ಸಮಸ್ಯೆ ಸೇರಿಕೊಂಡಿದೆ.

ನಿಜಾಮುದ್ದೀನ್ ನಗರ ನವೀಕರಣದ ಉಪಕ್ರಮವು ಮುನ್ಸಿಪಲ್ ಶಾಲೆಯನ್ನು ಭೌತಿಕ ಮೂಲಸೌಕರ್ಯ, ಶಾಲೆಯ ನಿರ್ವಹಣೆ, ತರಗತಿ ಪ್ರಕ್ರಿಯೆನ್ನು ಸುಧಾರಿಸುವುದು ಮತ್ತು ಸಮುದಾಯದೊಂದಿಗೆ ಒಳಗೊಳ್ಳುವಿಕೆಯಂತಹ ಕೆಲಸಗಳಲ್ಲಿ ತೊಡಗಿಸಿಕೊಂಡಿತು.

**ಹಿನ್ನೆಲೆ**

ಎಸ್.ಡಿ.ಎಂ.ಸಿ ಶಾಲೆಗೆ ದಾಖಲಾದ ಮಕ್ಕಳ ಪೋಷಕರನ್ನು ಅಕ್ಷರಸ್ಥರು ಎಂದು ವರ್ಗೀಕರಿಸಬಹುದಾದರೂ ಇನ್ನೂ ವಿಶಾಲವಾದ ವ್ಯಾಪ್ತಿಯಲ್ಲಿ ಅವರ ವೃತ್ತಿ ಮತ್ತು ಮನೆಯ ವಾತಾವರಣವು ಕಲಿಕೆಗೆ ಪೂರಕವಾಗಿರುವುದು ವಿರಳವಾಗಿರುವುದನ್ನು ಇದು ಹೊಂದಿದೆ. ಪೋಷಕರ ಸೀಮಿತ ಸಾಕ್ಷರತಾ ಮಟ್ಟ, ಅವರ ದೀರ್ಘಾವಧಿಯ ದುಡಿಮೆ, ಮನೆಯಲ್ಲಿ ಮುದ್ರಿತ ಸಾಮಗ್ರಿಗಳ ಕೊರತೆ, ಒಡಹುಟ್ಟಿದ ಕಿರಿಯರನ್ನು ನೋಡಿಕೊಳ್ಳಬೇಕಾದ ಅನಿವಾರ್ಯತೆ, ಸಣ್ಣ ವಯಸ್ಸಿನಲ್ಲೇ ಕೌಟುಂಬಿಕ ದೌರ್ಜನ್ಯ ಮತ್ತು ಅಸಭ್ಯ ಭಾಷಾ ಅನುಭವಕ್ಕೆ ಈಡಾಗಿರುವುದು ಶಾಲೆಯಲ್ಲಿರುವ ಈ ಮಕ್ಕಳ ಬದುಕನ್ನು ಲಕ್ಷಣೀಕರಿಸುತ್ತವೆ.

ನಿಜಾಮುದ್ದೀನ್ ಬಸ್ತಿಯಲ್ಲಿ ಬಿಹಾರ, ಬಂಗಾಲ ಮತ್ತು ಉತ್ತರಪ್ರದೇಶದ ಜನರೇ ಹೆಚ್ಚಿದ್ದರೂ, ದೇಶದ ಎಲ್ಲಾ ಭಾಗಗಳ ಜನರನ್ನು ಅದು ತನ್ನತ್ತ ಆಕರ್ಷಿಸುತ್ತದೆ. ಆದರೆ ಎಸ್.ಡಿ.ಎಂ.ಸಿ. ಶಾಲಾ ಮಾಧ್ಯಮವಾಗಿರುವ ಹಿಂದಿ ಭಾಷೆಯನ್ನು ಇಲ್ಲಿ ದಾಖಲಾದ ಬಹುತೇಕ ಮಕ್ಕಳು ಮನೆಯಲ್ಲಿ ಮಾತನಾಡುವುದಿಲ್ಲ. ಇಂಗ್ಲಿಷ್ ಮಾತನಾಡುವ ಅಭ್ಯಾಸವು ಅಷ್ಟಕ್ಕಷ್ಟೇ.

ಆದ್ದರಿಂದ, ನಿಜಾಮುದ್ದೀನ್‌ನ ಎಸ್.ಡಿ.ಎಂ.ಸಿ. ಪ್ರಾಥಮಿಕ ಶಾಲೆಗೆ ದಾಖಲಾದ ಮಕ್ಕಳಲ್ಲಿ ಕಂಡುಬರುವ ಸಾಮಾನ್ಯ ಅಂಶಗಳನ್ನು ಗುರುತಿಸುವುದಾದರೆ, ಅವರದು ಸಂಪನ್ಮೂಲ ಕೊರತೆ ಇರುವ ಕುಟುಂಬ, ಬಹುತೇಕರು ಮುಸಲ್ಮಾನರು, ಮನೆಯಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಶೈಕ್ಷಣಿಕವಾಗಿ ಬೆಂಬಲ (ಬಸ್ತಿಯಲ್ಲಿ ಕೆಲವೇ ಕೆಲವರು ಮತ್ತೊಬ್ಬ ಯುವಕನನ್ನು ಬೋಧಕನಾಗಿ ಗೊತ್ತುಮಾಡಿ-ಕೊಳ್ಳುತ್ತಾರೆ) ಮತ್ತು ಖಚಿತವಾಗಿಯೂ ಶಾಲೆಯ ಬೋಧನಾ ಭಾಷೆಯು ಮಾತೃಭಾಷೆಗಿಂತ ಬೇರೆಯಾಗಿರುತ್ತದೆ.

**2007ರಲ್ಲಿ ಶಾಲೆಯ ಸ್ಥಿತಿಗತಿ**

2007ರಲ್ಲಿ ಪ್ರಾಥಮಿಕ ಶಾಲಾ ಯೋಜನೆ ಶುರುವಾದಾಗ, 100ಕ್ಕಿಂತಲೂ ಹೆಚ್ಚು ಮಕ್ಕಳು ಶಾಲೆಗೆ ದಾಖಲಾಗಿದ್ದರೂ ಸಹಾ ಕೇವಲ 50-60 ಮಕ್ಕಳು ಹಾಜರಾಗುವ ಮೂಲಕ ಶಾಲೆ ನಿರ್ಜನವಾಗಿತ್ತು. ನಿಗದಿಯಂತೆ ಇಂತಿಷ್ಟು ಗಂಟೆ ಶಾಲೆ ನಡೆಯಬೇಕು ಎನ್ನುವುದು ನಡೆಯುತ್ತಿರುವುದಲ್ಲ ಮತ್ತು ನಿಗದಿತ ಪಠ್ಯಕ್ರಮದ ಬೋಧಿಸಲೇಬೇಕು ಎಂಬ ಆದ್ಯತೆ ಶಿಕ್ಷಕರಿಗೆ ಇರಲಿಲ್ಲ.

ಶಾಲಾ ಕಟ್ಟಡ ಮತ್ತು ಅದರ ನಿರ್ವಹಣೆಯು ಕಲಿಕೆಯ ವಾತಾವರಣವನ್ನು ನಿರ್ಮಿಸುವ ನಿಟ್ಟಿನಲ್ಲಿ ನೆರವಾಗುವಂತಿರಲಿಲ್ಲ. ಅಲ್ಲದೆ ಎಸ್.ಡಿ.ಎಂ.ಸಿಯ ಸುರಕ್ಷತಾ ಕ್ರಮಗಳನ್ನೂ ಅಲ್ಲಿ ಪಾಲಿಸಿರಲಿಲ್ಲ. ತರಗತಿ ಕೊಠಡಿಗಳಿಗೆ ಸಾಕಷ್ಟು ಗಾಳಿ ಬೆಳಕಾಗಲಿ, ಆರಾಮದಾಯಕವಾದ ಪೀಠೋಪಕರಣಗಳಾಗಲೀ, ಬೋಧನಾ ಸಲಕರಣೆಗಳಾಗಲೀ ಇರಲಿಲ್ಲ. ಬೋಧನೆ-ಕಲಿಕೆ ಪ್ರಕ್ರಿಯೆಯು ಕಲಿಕೆಗಿಂತ ದೈಹಿಕ ಶಿಕ್ಷೆಯ ಸ್ವರೂಪದಿಂದ ಕೂಡಿತ್ತು. ಶಿಕ್ಷಕ-ಮಗುವಿನ ನಡುವಿನ ಸಂಬಂಧವು ಭಯದಿಂದ ಇಲ್ಲವೇ ಆತಂಕದಿಂದ ಕೂಡಿದ್ದು ತರಗತಿಯ ವಾತಾವರಣವು ಪ್ರೇರಣಾದಾಯಕವಾಗಿರಲಿಲ್ಲ. ಮಕ್ಕಳು ಮತ್ತು ಶಿಕ್ಷಕರ ಹಾಜರಾತಿಯೂ ನಿಯಮಿತವಾಗಿರಲಿಲ್ಲ. ಮಕ್ಕಳ ಶೈಕ್ಷಣಿಕ ಮಟ್ಟವು ವಯಸ್ಸು ಮತ್ತು ತರಗತಿಯ ದೃಷ್ಟಿಯಿಂದ ಸಮರ್ಪಕವಾಗಿರಲಿಲ್ಲ. ಮಕ್ಕಳು ಕಲಿಯಬೇಕು ಎಂಬ ಧೋರಣೆ ಶಿಕ್ಷಕರಿಗೆ ಇರದುದು ಮತ್ತು ತಮ್ಮ ಮಕ್ಕಳು ಕಲಿಯಬಲ್ಲರು ಎಂಬ ನಂಬಿಕೆ ಪೋಷಕರಿಗೆ ಇರದುದು ಅದಕ್ಕಿಂತಲೂ ದೊಡ್ಡ ವಿಪರ್ಯಾಸವಾಗಿತ್ತು.

**ಶಾಲೆಯ ಪರಿವರ್ತನೆಯ ಪ್ರಕ್ರಿಯೆ**

ಸೌತ್ ಡೆಲ್ಲಿ ಮುನಿಸಿಪಲ್ ಕಾರ್ಪೊರೇಷನ್ (ಎಸ್.ಡಿ.ಎಂ.ಸಿ.) ಶಾಲೆಯು ಪರಿವರ್ತನೆಗೊಂಡಿರುವುದನ್ನು ನಿಜಾಮುದ್ದೀನ್ ಬಸ್ತಿಯ ನಿವಾಸಿಗಳು ಮತ್ತು ಸಂದರ್ಶಕರು ವ್ಯಾಪಕವಾಗಿ ಒಪ್ಪಿಕೊಂಡಿದ್ದಾರೆ. ಸೌತ್ ಡೆಲ್ಲಿ ಮುನಿಸಿಪಲ್ ಕಾರ್ಪೊರೇಷನ್ ಪ್ರತಿಭಾ ವಿದ್ಯಾಲಯದ ಮಾರ್ಪಾಡು ಪ್ರಕ್ರಿಯೆಯು ಸೌತ್ ಡೆಲ್ಲಿ ಮುನಿಸಿಪಲ್ ಕಾರ್ಪೊರೇಷನ್, ಭಾರತೀಯ ಪುರಾತತ್ವ ಸರ್ವೆ (ಎಎಸ್ಐ), ಕೇಂದ್ರ ಲೋಕೋಪಯೋಗಿ ಇಲಾಖೆ (ಸಿಪಿಡಬ್ಲ್ಯೂಡಿ) ಜತೆಗಿನ ಸಾರ್ವಜನಿಕ–ಖಾಸಗಿ ಸಹಭಾಗಿತ್ವದೊಂದಿಗೆ ನಡೆದಿತ್ತು. ಅಗಾಖಾನ್ ಪ್ರತಿಷ್ಠಾನ ಮತ್ತು ಅಗಾ ಖಾನ್ ಸಾಂಸ್ಕೃತಿಕ ಟ್ರಸ್ಟ್ (ಒಟ್ಟಾಗಿ ಅಗಾ ಖಾನ್ ಡೆವಲಪ್‌ಮೆಂಟ್ ನೆಟ್‌ವರ್ಕ್ – ಎಕೆಡಿಎನ್)ನ ಖಾಸಗಿ ಪಾಲುದಾರಿಕೆಯಿತ್ತು. ಸರಿಯಾದ ಅವಕಾಶ ಮತ್ತು ವಾತಾವರಣ ಒದಗಿಸಿದರೆ ಮಕ್ಕಳು ಕಲಿಯಬಲ್ಲರು ಎಂಬ ಬಲವಾದ ನಂಬಿಕೆಯೇ ಈ ಬದಲಾವಣೆಗಳನ್ನು ತರಲು ಪ್ರಮುಖ ಕಾರಣಗಳಲ್ಲೊಂದು.

ಎಲ್ಲಾ ಭಾಗೀದಾರರ ಜತೆ ಚರ್ಚಿಸಿದ ಬಳಿಕವಷ್ಟೇ ಶಾಲೆಯಲ್ಲಿ ಈ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿತ್ತು, ಮೊದಲನೆಯದಾಗಿ, ಉದ್ದೇಶಿತ ಬದಲಾವಣೆಗಳ ಬಗ್ಗೆ ಅಭಿಪ್ರಾಯವನ್ನು ತಿಳಿದುಕೊಳ್ಳುವ ಸಲುವಾಗಿ ಹಲವು ಕ್ಲಸ್ಟರ್ ಮಟ್ಟದ ಸಭೆಗಳ ಮೂಲಕ ಸಮುದಾಯದೊಂದಿಗೆ ಮಾತುಕತೆ ನಡೆಸಲಾಗಿತ್ತು. ಮಾದರಿ ಶಾಲೆ ರೂಪುಗೊಳ್ಳಲು ಏನೇನು ಮಾಡಬೇಕು ಎಂಬುದರ ಕುರಿತಾಗಿ ಪೋಷಕರು ಮತ್ತು ಮಕ್ಕಳಿಗೂ ತಿಳಿಸಿ ಹೇಳಲಾಗಿತ್ತು. ಆಗ ಪೋಷಕರು ಮತ್ತು ಮಕ್ಕಳು ತಮ್ಮ ಶಾಲೆ ಹೇಗಿರಬೇಕು ಎಂಬ ಅಭಿಪ್ರಾಯವನ್ನು ಹಂಚಿಕೊಂಡರು.

ಎರಡನೆಯದಾಗಿ, ಶಾಲೆಯ ಮೂಲಸೌಕರ್ಯ ಮತ್ತು ಪ್ರಕ್ರಿಯೆಗಳಲ್ಲಿ ಬದಲಾವಣೆ ಕಂಡುಬಂದರೆ, ಹೆಚ್ಚಿನ ಮಕ್ಕಳನ್ನು ಶಾಲೆಯತ್ತ ಸೆಳೆಯಲು ಸಹಕಾರಿ ಎಂಬ ಅಂಶವನ್ನೇ ಗುರಿಯಾಗಿಟ್ಟುಕೊಂಡು ಶಾಲೆಯ ಭೌತಿಕ ಸ್ಥಿತಿಗತಿಯ ಬಗ್ಗೆ ಆಂತರಿಕ ಮೌಲ್ಯಮಾಪನ ಮಾಡಲಾಯಿತು. ಇದನ್ನು ಸ್ಥಿತಿಗತಿಯ ಮೌಲ್ಯಮಾಪನ ಮತ್ತು ಎಸ್‌ಡಿಎಂಸಿ ನಿಯಮಗಳನ್ನು ಗಮನದಲ್ಲಿಟ್ಟುಕೊಂಡೇ ಮಾಡಲಾಯಿತು. ಜೊತೆಗೆ, ಕಲಿಕೆಗೆ ಪೂರಕವಾಗುವಂತೆ ಶಾಲೆಯ ಕಟ್ಟಡವನ್ನು ವಿನ್ಯಾಸಗೊಳಿಸಲು ನೆರವಾಗುವುದಕ್ಕಾಗಿ ಒಬ್ಬ ತಜ್ಞ ವಾಸ್ತುಶಿಲ್ಪಿಯನ್ನೂ ಗೊತ್ತುಮಾಡಲಾಯಿತು. ಇದನ್ನು 'ಕಲಿಕೆಯ ಒಂದು ಸಾಧನವಾಗಿ ಕಟ್ಟಡ' (Building as a Learning Aid– ಬಾಲಾ) ಮಾದರಿ ಎಂದು ಕರೆಯಲಾಗುತ್ತದೆ.

ಮೂರನೆಯದಾಗಿ, ಮಕ್ಕಳ ಶೈಕ್ಷಣಿಕ ಮಟ್ಟವನ್ನು ಹಿಂದಿ–ಗಣಿತದ ಮೂಲಕ ಮೌಲ್ಯಮಾಪನ ಮಾಡಲಾಗುತ್ತಿತ್ತು. ಅಂದರೆ, ದೆಹಲಿ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಸಹಕಾರದೊಂದಿಗೆ ಸಾಕ್ಷರತೆ ಮತ್ತು ಅಂಕೆ ಸಂಖ್ಯೆಗಳ ಆಧಾರದಲ್ಲಿ ವಿನ್ಯಾಸ ಮಧ್ಯಸ್ಥಿಕೆಗಳನ್ನು ರೂಪಿಸಲು ಸಹಾಯವನ್ನು ಮಾಡಲಾಗುತ್ತಿತ್ತು.

ಮೂಲ ಮೌಲ್ಯಮಾಪನಗಳು ಮತ್ತು ಪರಿಸ್ಥಿತಿಯ ವಿಶ್ಲೇಷಣೆಯ ಆಧಾರದಲ್ಲಿ ನಿಜಾಮುದ್ದೀನ್ ನವೀಕರಣ ಉಪಕ್ರಮದ ಮಧ್ಯಸ್ಥಿಕೆಗಾಗಿ ಈ ಕೆಳಗಿನ ಅಂಶಗಳನ್ನು ಸೇರಿಸಲಾಯಿತು. ಅವುಗಳೆಂದರೆ:

- ಶಾಲೆಯ ಕಟ್ಟಡಗಳ ಭೌತಿಕ ಅಭಿವೃದ್ಧಿ ಮತ್ತು ಮೂಲ–ಸೌಕರ್ಯಗಳ ಸುಧಾರಣೆ
- ಶಾಲೆಯ ನಿರ್ವಹಣೆ
- ಪಠ್ಯದಲ್ಲಿ ಮೌಲ್ಯವರ್ಧನೆ ಮತ್ತು ಇತರ ಮಾರ್ಗೋ–ಪಾಯಗಳನ್ನು ಒಳಗೊಂಡಿರುವ ತರಗತಿ ಪ್ರಕ್ರಿಯೆಗಳು
- ಸಮುದಾಯದೊಂದಿಗೆ ತೊಡಗಿಕೊಳ್ಳುವುದು
- ಮಕ್ಕಳು ವಿದ್ಯಾಭ್ಯಾಸ ಮುಂದುವರಿಸಲು ಅನುಕೂಲ–ವಾಗುವಂತೆ ಶಾಲೆ ಬಿಟ್ಟ ನಂತರದ ಕಾರ್ಯಕ್ರಮ.

**ನಿಜಾಮುದ್ದೀನ್ ಮಾದರಿ**

ನಿಜಾಮುದ್ದೀನ್ ಮಾದರಿಯು ಶಿಕ್ಷಣದ ಗುಣಮಟ್ಟವನ್ನು ಹಾಗೂ ನೈಜವಾಗಿ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಅವಶ್ಯವಾದ ಕೆಲವು ನಿರ್ಣಾಯಕ ಅಂಶಗಳ ಬಗ್ಗೆ ಬಹುತೇಕ ಗಮನ ಕೇಂದ್ರೀಕರಿಸಿತ್ತು. ಇದೇ ಕಾರಣಕ್ಕೆ ಈ ಯೋಜನೆಯು ಆರಂಭಿಕ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ (ಇಸಿಸಿಇ). ಪ್ರಾಥಮಿಕ ಶಿಕ್ಷಣ, ಆರೋಗ್ಯ, ಜನಜೀವನ, ನೈರ್ಮಲ್ಯ, ಘನ ತ್ಯಾಜ್ಯ ನಿರ್ವಹಣೆ ಮತ್ತು ಸಂಸ್ಕೃತಿಯಂತಹ ವಿಭಾಗಗಳಲ್ಲಿ ಕಾರ್ಯನಿರ್ವಹಿಸಿತ್ತು. ತರಗತಿಯ ಪ್ರಕ್ರಿಯೆ ಮತ್ತು ಮಕ್ಕಳ ಕಲಿಕೆಗೆ ನೆರವಾಗುವಂತೆ ಭಾಷಾ ಬೋಧನೆ ಮತ್ತು ಕಲೆಯ ಮಧ್ಯಪ್ರವೇಶದ ಮೂಲಕ ಪಠ್ಯಕ್ರಮದ ಸಮೃದ್ಧಗೊಳಿಸುವಿಕೆ ಎಂಬ ಎರಡು ಸಂಗತಿಗಳ ಮೇಲೆ ಈ ಲೇಖನವು ಕೇಂದ್ರೀಕರಿಸುತ್ತದೆ

**ಭಾಷಾ ಬೋಧನೆ**

ಪ್ರಾಥಮಿಕ ಹಂತದಲ್ಲಿ ಹಿಂದಿ ಕಲಿಸಲು ಅನುಸರಿಸುವ ಅತ್ಯಂತ ಸಾಮಾನ್ಯ ತಂತ್ರವೆಂದರೆ, ವರ್ಣಮಾಲೆಯನ್ನು ಕಲಿಸುವುದು, ತದನಂತರ ಕಾಗುಣಿತಗಳ ಬಾಯಿಪಾಠ ಮಾಡುವುದು– ಇದನ್ನು ಮತ್ತೆ ಸ್ವರಾಕ್ಷರ ಮತ್ತು ವ್ಯಂಜನ ಎಂದು ವರ್ಗೀಕರಿಸುವುದು. ಆಮೇಲೆ ಮಕ್ಕಳಿಗೆ ಮಾತ್ರೆ (ಸ್ವರ ಧ್ವನಿಗಳು) ಇಲ್ಲದ ಸಣ್ಣ, ಎರಡು–ಮೂರು ಅಕ್ಷರಗಳ ಪದಗಳನ್ನು, ನಂತರ ಅದೇ ಪದಗಳನ್ನು ಬಳಸಿ ಸಣ್ಣ ವಾಕ್ಯ ರಚಿಸುವುದನ್ನು ಹೇಳಿಕೊಡಲಾಗುತ್ತದೆ. ಮುಂದುವರಿದು, ಮಕ್ಕಳು ತಮ್ಮ ಪಠ್ಯಪುಸ್ತಕದಲ್ಲಿ ಪಾಠಗಳನ್ನು ಓದಿ ಬರವಣಿಗೆಯಲ್ಲಿ ತೊಡಗಬೇಕು, ಮುಖ್ಯವಾಗಿ ಪ್ರಶ್ನೆಗಳಿಗೆ ಉತ್ತರ ಬರೆಯಬೇಕಾಗುತ್ತದೆ.

ಸೌತ್ ಡೆಲ್ಲಿ ಮುನಿಸಿಪಲ್ ಕಾರ್ಪೊರೇಷನ್ ಶಾಲೆಯು ಎನ್.ಸಿ.ಇ.ಆರ್.ಟಿ ಪಠ್ಯಪುಸ್ತಕಗಳನ್ನು ಬಳಸುತ್ತದೆ. ಅದು 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಅನುಸರಿಸುವ ಎನ್.ಸಿ.ಇ.ಆರ್.ಟಿ ಪಠ್ಯವು ಭಾಷಾ ಬೋಧನಾ ವಿಧಾನದಲ್ಲಿ ಸಮಗ್ರ ಬದಲಾವಣೆಯನ್ನು ಮಾಡಿಕೊಂಡಿದ್ದು, ಸಂಪೂರ್ಣವಾಗಿ ಭಾಷಾ ಬೋಧನೆಯ ವಿಧಾನವನ್ನು (Whole language teaching) ಅಳವಡಿಸಿಕೊಂಡಿದೆ. ಶಿಕ್ಷಕರು, ಸೇವೆಯಲ್ಲಿದ್ದುಕೊಂಡು ದುರದೃಷ್ಟವಶಾತ್, ಯಾವುದೇ ತರಬೇತಿ ಪಡೆಯದೇ ಇರುವ ಕಾರಣ ಅವರಿಗೆ ಹೊಸ ಪಠ್ಯಪುಸ್ತಕ ಬಳಕೆ ಆರಾಮದಾಯಕ–ವೆನಿಸುವುದಿಲ್ಲ.

ಅಗಾ ಖಾನ್ ಫೌಂಡೇಷನ್ ಸೌತ್ ಡೆಲ್ಲಿ ಮುನಿಸಿಪಲ್ ಕಾರ್ಪೊರೇಷನ್ ಶಿಕ್ಷಕರಿಗೆ ಮತ್ತು ನೇಮಕಗೊಂಡ ಸಮುದಾಯ ಶಿಕ್ಷಕರಿಗಾಗಿ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮಗಳಲ್ಲಿ ಈ ಅಂಶಗಳ ಬಗ್ಗೆ ಗಮನವಹಿಸಿತು. ತರಬೇತಿಯಲ್ಲಿ ಶಿಕ್ಷಕರು ಹೊಸ ವಿಧಾನಗಳನ್ನು ಅನುಸರಿಸಿ ಪಾಠಗಳನ್ನು ಯೋಜಿಸುವುದನ್ನು ಕಲಿತರು ಮತ್ತು ಕತೆಗಳ ನಕ್ಷೆಗಳು, ಪಾತ್ರಗಳ ಪಿರಮಿಡ್, ಪಾತ್ರಗಳ ವಿಶ್ಲೇಷಣೆ, ಏನು, ಯಾವಾಗ, ಎಲ್ಲಿ, ಯಾರು, ಯಾಕೆ ಮತ್ತು







ಯಾರಿಗೆ (6 Ws framework - what, when, where, who, why and whom) – ಎಂಬ ಆರು ಡಬ್ಲ್ಯೂಗಳ ಚೌಕಟ್ಟಿನ ಬಗ್ಗೆ ಕಲಿತರು. ಅಲ್ಲದೆ ಕತೆಯಲ್ಲಿನ ಕೇಂದ್ರ ಯೋಜನೆ ಹಾಗೂ ಇತರ ಯೋಜನೆಗಳ ನಡುವಿನ ಕೊಂಡಿಯನ್ನು ಅರ್ಥೈಸಿಕೊಳ್ಳುವುದನ್ನೂ ತರಬೇತಿಯಲ್ಲಿ ಕಲಿತರು. ಅಲ್ಲದೆ ಈ ರೀತಿಯ ಹೊಸ ಅಭ್ಯಾಸಗಳನ್ನು 'ಮಾಡುವ ಕಲೆ'ಯನ್ನೂ ಇವರು ಕಲಿತುಕೊಂಡರು. ಇಡೀ ಪಠ್ಯಪುಸ್ತಕಕ್ಕೆ ಬೇಕಾದ ಪಾಠ ಯೋಜನೆಯನ್ನು ಸಿದ್ಧಪಡಿಸಲಾಯಿತು ಮತ್ತು ಈ ಹೊಸ ಪಠ್ಯಕ್ರಮವನ್ನು ಬಳಸುವ ನಿಟ್ಟಿನಲ್ಲಿ ಇದು ಶಿಕ್ಷಕರಿಗೆ ನೆರವಾಯಿತು. ಭಾಷಾ ನಿಯಮದಲ್ಲಿನ ಬದಲಾವಣೆಯ ವಿಧಾನದ ಹಿಂದಿನ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಲು ಕೂಡ ಶಿಕ್ಷಕರಿಗೆ ಸಹಾಯ ಮಾಡಲಾಯಿತು.

ತರಬೇತಿ ಅವಧಿಯಲ್ಲಿ ಶಿಕ್ಷಕರು ಬೋಧನಾ– ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸಿದ ಕಾರಣ ಮಕ್ಕಳು ಹೊಸ ವಿಧಾನದ ಚೌಕಟ್ಟಿನಲ್ಲೇ ಅಂದರೆ, ಅನೇಕ ಆಟಗಳನ್ನು ಒಳಗೊಂಡ, ಭಾರೀ ಬದಲಾವಣೆಯುಳ್ಳ ಹೊಸ ವಿಧಾನದಲ್ಲಿ – ಕಲಿಯಲು ಸಾಧ್ಯವಾಯಿತು. ಭಾಷಾ ಕಲಿಕೆಗೆ ಸಹಾಯವಾಗುವಂತೆ ಒಂದು ಗ್ರಂಥಾಲಯವನ್ನೂ ತೆರೆಯಲಾಯಿತು.

ಕೈಗೊಳ್ಳುವ ಚಟುವಟಿಕೆಯ ಆಧಾರದ ಮೇಲೆ ಪ್ರಸ್ತುತ ಚಾಲ್ತಿಯಲ್ಲಿದ್ದ ತರಗತಿಯ ಭೌತಿಕ ಸ್ಥಿತಿಯನ್ನು ಮರುವಿನ್ಯಾಸ ಮಾಡುವ ನಿಟ್ಟಿನಲ್ಲಿಯೂ ತರಬೇತಿಯ ಕಾರ್ಯಕ್ರಮಗಳಲ್ಲಿ ಗಮನ ಕೊಡಲಾಗಿತ್ತು. ಶಾಲೆಯ ರೂಪಾಂತರ ಪ್ರಕ್ರಿಯೆಯಲ್ಲಿ, ಕಡಿಮೆ ಭಾರದ ಪೀಠೋಪಕರಣಗಳ ಅಳವಡಿಕೆಯೂ ಒಳಗೊಂಡಿತ್ತು. ಮಕ್ಕಳು ಸಾಲಾಗಿ ಕುಳಿತುಕೊಳ್ಳಲು ಯಾವಾಗಲೂ ನಿರಾಕರಿಸುತ್ತಿದ್ದ ಕಾರಣ ಈ ಪೀಠೋಪಕರಣಗಳನ್ನು ತಾವೇ ಬೇಕಾದಲ್ಲಿಗೆ ಸುಲಭವಾಗಿ ಒಯ್ದು ಬದಲಾವಣೆ ಮಾಡಿಕೊಳ್ಳಬಹುದಾಗಿತ್ತು. ಮಕ್ಕಳಿಗೆ ಸಣ್ಣ ಸಣ್ಣ ಗುಂಪುಗಳಲ್ಲಿ ಕಲಿಯುವುದು ಗೊತ್ತಿರಲಿಲ್ಲ ಆದರೆ ಕ್ರಮೇಣ, ಆ ರೀತಿ ಕೆಲಸ ಮಾಡುವಾಗ ಪ್ರತಿ ಮಗುವೂ ತನ್ನ ಪಾಲು ಇರುವಂತೆ ನೋಡಿಕೊಳ್ಳಬೇಕು ಎಂಬ ಅಂಶವನ್ನು ಮಕ್ಕಳು ಅರಿತರು. ಕತೆ ಹೇಳುವ ಅವಧಿಯಲ್ಲಿ ಶಿಕ್ಷಕಿ ಮಕ್ಕಳನ್ನು ತನ್ನ ಹತ್ತಿರ ಕರೆದುಕೊಳ್ಳುತ್ತಿದ್ದರು. ಇದರಿಂದ ತರಗತಿಯಲ್ಲಿ ಹೊಸ ಚೈತನ್ಯ ತುಂಬುತ್ತಿತ್ತು. ಸೌತ್ ಡೆಲ್ಲಿ ಮುನಿಸಿಪಲ್ ಕಾರ್ಪೊರೇಷನ್ ವರ್ಷದ ಕೊನೆಯ ಪರೀಕ್ಷೆಯ ಸಂದರ್ಭದಲ್ಲಿದ್ದಾಗ ಅಗಾ ಖಾನ್ ಪ್ರತಿಷ್ಠಾನವು ಮಕ್ಕಳಿಗೆ ಓದಲು, ಬರೆಯಲು, ಗ್ರಹಿಸಲು ಮತ್ತು ಮಾತನಾಡಲು ಕಲಿಸುವ ಮೂಲಕ ಮೌಲ್ಯಮಾಪನ ಮಾಡುವತ್ತ ಗಮನ ಕೇಂದ್ರೀಕರಿಸಿತು. ಪಠ್ಯೇತರ ಅಂಶಗಳುಳ್ಳ ಪ್ರಶ್ನೆಗಳನ್ನು ಕೇಳುವ ಮೂಲಕ ಮಕ್ಕಳ ಕಲ್ಪನಾ ಸಾಮರ್ಥ್ಯವನ್ನೂ ಮೌಲ್ಯಮಾಪನ ಮಾಡಲಾಯಿತು.

ಈ ಎಲ್ಲಾ ಬಹುತಂತ್ರಗಳು ಮಕ್ಕಳು ತಮ್ಮ ಭಾಷಾ ಕೌಶಲ ಮತ್ತು ಭಾಷಾ ಸಾಮರ್ಥ್ಯ ಬೆಳೆಸುವಲ್ಲಿ ಶೇಕಡಾ ೨೦ರಿಂದ ಶೇಕಡಾ ೮೦ರಷ್ಟು ಹೆಚ್ಚಳ ಕಂಡುಕೊಳ್ಳಲು ನೆರವಾಯಿತು.

**ಕಲೆಯ ಮಧ್ಯಪ್ರವೇಶ**

ಅಗಾ ಖಾನ್ ಸಾಂಸ್ಕೃತಿಕ ಟ್ರಸ್ಟ್ ನೇತೃತ್ವದಲ್ಲಿ ನಡೆದ ಈ ಯೋಜನೆಯಲ್ಲಿ ಕಲೆಯ ಮಧ್ಯಪ್ರವೇಶವು ತಾರ್ಕಿಕ ವಿಧಾನವಾಗಿ ಮುಂದೆ ತೆರೆದುಕೊಂಡಿತು. ಇದು ನಾಟಕ ಮತ್ತು ಛಾಯಾಗ್ರಹಣ ಕಾರ್ಯಾಗಾರದೊಂದಿಗೆ ಶುರುವಾಯಿತು. ಈ ಕಾರ್ಯಾಗಾರಕ್ಕೆ ಮಕ್ಕಳು ತಮ್ಮ ಪೋಷಕರನ್ನು ತಾವೇ ತಯಾರಿಸಿದ ಆಮಂತ್ರಣ ಪತ್ರಗಳನ್ನು ಕೊಟ್ಟು ಆಹ್ವಾನಿಸಿದರು. ಶಾಲೆಯಲ್ಲಿ ನಡೆಯುವ ನಾಟಕ ಪ್ರದರ್ಶನಕ್ಕೆ ಊರವರನ್ನು ಇದೇ ಮೊದಲ ಬಾರಿಗೆ ಆಹ್ವಾನಿಸಲಾಗಿತ್ತು. ಇಂತಹ ಮಧ್ಯಪ್ರವೇಶದ ಅವಕಾಶಗಳನ್ನು ಸೃಷ್ಟಿಸಲೇಬೇಕಾಗಿತ್ತು. ಶಾಲೆಯ ವೇಳಾಪಟ್ಟಿಗೆ, ಸಂಪನ್ಮೂಲ ಶಿಕ್ಷಕರನ್ನು ಗುರುತಿಸಲು ಮತ್ತು ಮಕ್ಕಳಿಗೆ ಅವಕಾಶ ಸೃಷ್ಟಿಸಲು ಸಮಯಾವಕಾಶ ಹೊಂದಿಸಬೇಕಾಯಿತು.

ಇಬ್ಬರು ಕಲಾ ಶಿಕ್ಷಕರನ್ನು ನೇಮಕ ಮಾಡಲಾಯಿತು ಮತ್ತು ವೇಳಾಪಟ್ಟಿ ಬದಲಾಯಿಸುವ ಮೂಲಕ ಪ್ರತಿ ಮಗುವೂ ದಿನಾಲೂ ಕನಿಷ್ಠ ಒಂದು ಗಂಟೆ ಕಲಾ ತರಗತಿಯಲ್ಲಿ ಪಾಲ್ಗೊಳ್ಳುವಂತೆ ಮಾಡಲಾಯಿತು. ಭಾಷಾ ಬೋಧನೆಯಲ್ಲಿ ನಾಟಕದ ಪಾತ್ರಗಳನ್ನು ಮಾಡುವುದು, ತಿಂಗಳಿಗೊಮ್ಮೆ ಬಾಲ ಸಭಾಗಳು ಮತ್ತು ವಾರಕ್ಕೊಮ್ಮೆ ಬೆಳಗಿನ ವಿಶೇಷ ಕಲಾಪಗಳ ಮೂಲಕ ವಿಶೇಷ ಸಂಭ್ರಮಾಚರಣೆ ದಿನಗಳನ್ನು ಏರ್ಪಡಿಸುವ ಮೂಲಕ ಮಕ್ಕಳಿಗೆ ಅಭಿವ್ಯಕ್ತಿಗೆ ಒಂದು ಔಪಚಾರಿಕ ವೇದಿಕೆಯನ್ನು ನಿರ್ಮಿಸಿ-ಕೊಡಲಾಯಿತು. ಮಕ್ಕಳ ಬರವಣಿಗೆ ಮತ್ತು ಚಿತ್ರಕಲೆಯ ಪ್ರದರ್ಶನಕ್ಕಾಗಿ ರಂಗ್ ತರಂಗ್ ಎಂಬ ನಿಯತಕಾಲಿಕವನ್ನು ಆರಂಭಿಸಲಾಯಿತು. ಪಾರಂಪರಿಕ ಪಠ್ಯದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳನ್ನೂ ಸೇರಿಸಲಾಯಿತು. ಇಕೊ ಕ್ಲಬ್ ಮೂಲಕ ಪರಿಸರದ ಪ್ರಜ್ಞೆ ಮೂಡಿಸುವ ಪ್ರಯತ್ನವನ್ನೂ ಮಾಡಲಾಯಿತು. 'ಚೀಲ ರಹಿತ ದಿನ' ಎಂಬುದಾಗಿ ಕರೆದು ಅಂದು ವಿಶೇಷ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು.

ಈ ಎಲ್ಲಾ ಚಟುವಟಿಕೆಗಳಿಂದಾಗಿ ಮಕ್ಕಳ ಲೋಕಜ್ಞಾನ, ಅಭಿವ್ಯಕ್ತಿಗೆ ಅವಕಾಶ, ಆತ್ಮವಿಶ್ವಾಸ ಗಳಿಕೆ ಮತ್ತು ಹಾಜರಾತಿಯಲ್ಲಿ ಗಮನಾರ್ಹ ಹೆಚ್ಚಳವಾಗಿ ಶಾಲೆಗೆ ಪ್ರತಿನಿತ್ಯ ತಪ್ಪದೇ ಹಾಜರಾಗಲು ತೊಡಗಿದರು. ನಿಜಾಮುದ್ದೀನ್ ಬಸ್ತಿಯಲ್ಲಿ ಪೋಷಕರ ಶಿಕ್ಷಣ ಮಟ್ಟ ಅತ್ಯಂತ ಕೆಳಮಟ್ಟದಲ್ಲಿದ್ದರೂ ತಮ್ಮ ಮಕ್ಕಳನ್ನು ಓದಿಸುವ ಹಂಬಲ ಅವರಿಗಿತ್ತು. ಹಾಗಾಗಿ ಅಂತಹ ಸಮುದಾಯವನ್ನು ಒಳಗೊಳ್ಳಿಸಿ-ಕೊಳ್ಳುವುದು ಬಹಳ ಅವಶ್ಯ. ಕೆಲವೊಮ್ಮೆ, ಪೋಷಕರು ಶಿಕ್ಷಕರೊಂದಿಗೆ ಬೆರೆಯಲು ಹಿಂದೇಟು ಹಾಕುತ್ತಿದ್ದರು.

**ಆಲೋಚಿಸಬೇಕಾದ ಅಂಶಗಳು**

ಶಾಲೆಯೇನೋ ರೂಪಾಂತರಗೊಂಡಿತು. ಆದರೆ ಅದನ್ನು ಅಗಾಖಾನ್ ಅಭಿವೃದ್ಧಿ ಜಾಲದ ಘಟಕಗಳಿಂದ ಯಾವುದೇ ಸಂಪನ್ಮೂಲಗಳ ಕ್ರೋಡೀಕರಣ / ನೆರವು ಇಲ್ಲದೆ ಮುಂದುವರಿಸುವುದು ಹೇಗೆ ಎಂಬುದೇ ದೊಡ್ಡ ಪ್ರಶ್ನೆಯಾಗಿತ್ತು. ಸರ್ಕಾರದಿಂದ ಈಗ ಕೊಟ್ಟಿರುವ ಖರ್ಚುವೆಚ್ಚಗಳ ಹೊರತಾಗಿ ಹೆಚ್ಚುವರಿ ಸಂಪನ್ಮೂಲ ದೊರಕುವುದು ಅಸಾಧ್ಯ ಎಂದು ತೋರಿತು. ಎನ್.ಸಿ.ಟಿ. ದೆಹಲಿ ಸರ್ಕಾರವು ಶಿಕ್ಷಣಕ್ಕಾಗಿ ಅತ್ಯಧಿಕ ಪ್ರಮಾಣದಲ್ಲಿ ಅಂದರೆ ಶೇಕಡಾ 26ರಷ್ಟು ಅನುದಾನ ಮಂಜೂರು ಮಾಡಿತ್ತು. ಆದರೆ, ಪ್ರಾಥಮಿಕ ಶಿಕ್ಷಣದ ಹೊಣೆ ಸ್ಥಳೀಯ ಆಡಳಿತದ್ದಾಗಿದ್ದು, (ಇಲ್ಲಿ ನಗರಸಭೆ) ಹಾಗಾಗಿ ಈ ಅನುದಾನ ಮಂಜೂರಾತಿಯಿಂದ ಶಾಲೆಗೆ ಪ್ರಯೋಜನವಾಗುವುದಿಲ್ಲ.

ಮುಂದುವರಿಯುತ್ತಾ ಹೋದಂತೆ ಎದುರಾದ ಕೆಲವು ಸಮಸ್ಯೆಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ:

*ಕಲಿಕೆಗೆ ಸೌಕರ್ಯ ಒದಗಿಸಬೇಕು ಎಂಬ ಅಂಶ ಈಗ ಎಲ್ಲರಿಗೂ ತಿಳಿದಿದ್ದರೂ, ಸರ್ಕಾರಿ ಶಾಲೆಗಳಲ್ಲಿ ಸಿಬ್ಬಂದಿ ಕೊರತೆ, ಅನೈರ್ಮಲ್ಯ, ಮಕ್ಕಳನ್ನು ಕಲಿಕೆಯತ್ತ ಆಕರ್ಷಿಸುವಂತಹ ವ್ಯವಸ್ಥೆಯ ಕೊರತೆ ಇನ್ನೂ ಮುಂದುವರಿದಿದೆ. ಗರಿಷ್ಠ ಕಲಿಕಾ ಅವಧಿಯ ಬಗ್ಗೆ ಸಾಕಷ್ಟು ಸಂಶೋಧನಾ ಅಧ್ಯಯನಗಳು ನಡೆದಿವೆ. ಮಧ್ಯಾಹ್ನದ ಊಟದ ಯೋಜನೆಯಿಂದ ಮಕ್ಕಳನ್ನು ಶಾಲೆಯತ್ತ ಸೆಳೆಯಬಹುದೇ, ಶೌಚಾಲಯಗಳಿದ್ದರೆ ಹೆಣ್ಣು ಮಕ್ಕಳ ಹಾಜರಾತಿ ಹೆಚ್ಚಿಸಬಹುದೇ ಮುಂತಾದ ಅಂಶಗಳ ಮಹತ್ವದ ಅರಿವು ನಮಗೂ ಇದೆ. ಆದರೆ, ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳಬಲ್ಲ ಶಾಲೆಗಳನ್ನು ನಿರ್ಮಿಸುವ ಇಚ್ಛೆಯ ಕೊರತೆ ಇದೆ ಎಂದು ನಾವು ಗಮನಿಸಿದ್ದೇವೆ. ಶಾಲೆಗಳಲ್ಲಿ ನಮಗೆ ತಿಳಿದಿರುವಂತಹ ಮೂಲಸೌಕರ್ಯಗಳ ಚರ್ಚೆಗಿಂತ ಪಠ್ಯಕ್ರಮದಲ್ಲಿ ಮಾರ್ಪಾಡು, ಭಾಷಾ ಬೋಧನಾ ಕ್ರಮದಲ್ಲಿ ಬದಲಾವಣೆ ಮಾಡುವಂತಹ ಸಂಗತಿಗಳ ಬಗ್ಗೆ ಚರ್ಚೆ ನಡೆಯಬೇಕಾಗಿದೆ.


*ತಮ್ಮ ಮಕ್ಕಳ ಅವಶ್ಯಕತೆಯನ್ನು ಅರಿತು ಅವರಿಗೆ ಏನು ಬೇಕು ಮತ್ತು ಹೇಗೆ ಪ್ರೋತ್ಸಾಹಿಸಬೇಕೆನ್ನುವುದು ಶಿಕ್ಷಕರಿಗೆ ತಿಳಿದಿದೆ ಎಂದು ಭಾವಿಸಿ ಶಿಕ್ಷಕರನ್ನು ಸ್ವಾಯತ್ತ ವ್ಯಕ್ತಿಗಳಾಗಿ ಪರಿಗಣಿಸಲು ಶೈಕ್ಷಣಿಕ ಆಡಳಿತ ಮಂಡಳಿಗಳಿಗೆ ಯಾವುದರ ಅಗತ್ಯವಿದೆ?

*ದೆಹಲಿಯ ಮಕ್ಕಳು ನವೆಂಬರ್‌ನಿಂದೀಚೆಗೆ ಚಳಿಗಾಲದ ಮಂಜು, ತೀವ್ರವಾದ ಚಳಿ, ಪ್ರತಿಭಟನೆಗಳು, ದೊಂಬಿ ಮತ್ತು ಈಗ ಕೋವಿಡ್-19 ನಂತಹ ಒಂದಿಲ್ಲೊಂದು ಕಾರಣಗಳಿಂದಾಗಿ ಶಾಲೆಗೆ ನಿಯಮಿತವಾಗಿ ಹೋಗಿಯೇ ಇಲ್ಲ. ಶ್ರೀಮಂತರ ಮನೆಯ ಮಕ್ಕಳಿಗೆ ಡಿಜಿಟಲ್ ತರಗತಿ ಲಭ್ಯವಿದ್ದರೆ, ಸಂಪನ್ಮೂಲದ ಕೊರತೆಯಿರುವ ಕುಟುಂಬದ ಮಕ್ಕಳಿಗೆ ಆ ಅವಕಾಶವಿಲ್ಲ. ಅಂತಹ ಕುಟುಂಬದ ಮಕ್ಕಳಿಗೆ ಹೆಚ್ಚು ಎಂದರೆ 25-30 ನಿಮಿಷ ಮಾತ್ರ ಫೋನ್ ಲಭ್ಯವಾಗಬಹುದು ಮತ್ತು ಅವರಿಗೆ ಮನೆಯಲ್ಲಿ ಕಂಪ್ಯೂಟರ್ ಲಭ್ಯವಿರುವುದಿಲ್ಲ. ಸೌತ್ ಡೆಲ್ಲಿ ಮುನಿಸಿಪಲ್ ಕಾರ್ಪೋರೇಷನ್ ಒಂದು ರೂಪದಲ್ಲಿ ಡಿಜಿಟಲ್ ತರಗತಿ ನಡೆಸಲು ಆರಂಭಿಸಿದ್ದರೂ ಪರಿಣಾಮ ಏನಾಗುತ್ತದೆ ಎಂದು ಕಾದುನೋಡಬೇಕಿದೆ. ಯಾವ ಮಕ್ಕಳು ಇ.ಡಬ್ಲ್ಯೂ.ಎಸ್. ಕೋಟಾದಡಿ 'ಸರ್ಕಾರಿ ಶಾಲೆ'ಗಳಿಗೆ ದಾಖಲಾಗಿದ್ದಾರೋ ಅವರು, ಡಿಜಿಟಲ್ ತರಗತಿಗೆ ಹಾಜರಾಗಿರುವ, ಉಳ್ಳವರ ಮಕ್ಕಳಿಗಿಂತ ಕಲಿಕೆಯಲ್ಲಿ ತಮ್ಮ ಸಹಪಾಠಿಗಳಿಗಿಂತ ಸಾಕಷ್ಟು ಹಿಂದೆ ಇದ್ದಾರೆ.

ಇದೆಲ್ಲದರ ಪರಿಣಾಮ, ಮಕ್ಕಳು ಶಾಲೆಗೆ ಹೋಗುತ್ತಾರೋ ಇಲ್ಲವೋ ಎಂಬುದರ ಮೇಲೆ ನಿಂತಿಲ್ಲ, ಬದಲಾಗಿ ಅವರ ಕಲಿಕೆಗೆ ಸಂಬಂಧಿಸಿದ ಈ ಎಲ್ಲಾ ಅಂಶಗಳನ್ನು ಅವಲಂಬಿಸಿದೆ ಎಂಬುದನ್ನು ನೋಡಬೇಕಾಗಿದೆ.



**ಜ್ಯೋತ್ಸ್ನಾ ಲಾಲ್,** ನಿಜಾಮುದ್ದೀನ್ ನಗರ ನವೀಕರಣ ಉಪಕ್ರಮದ ಅಗಾ ಖಾನ್ ಸಾಂಸ್ಕೃತಿಕ ಟ್ರಸ್ಟ್‌ನಲ್ಲಿ ಯೋಜನಾ ನಿರ್ದೇಶಕಿ. ಅವರು ನಿಜಾಮುದ್ದೀನ್ ಬಸ್ತಿಯಲ್ಲಿ ಸಾಮಾಜಿಕ ಅಭಿವೃದ್ಧಿ ಉಪಕ್ರಮಗಳ ನೇತೃತ್ವ ವಹಿಸುತ್ತಾರೆ. ಇವರನ್ನು jyotsna.lall@akdn.org ನಲ್ಲಿ ಸಂಪರ್ಕಿಸಬಹುದು.



**ಹೈದರ್ ಮೆಹ್ದಿ ರಿಜ್ವಿ** ಅವರು ಅಗಾ ಖಾನ್ ಅಭಿವೃದ್ಧಿ ಜಾಲದ ನಿಜಾಮುದ್ದೀನ್ ನಗರ ನವೀಕರಣ ಉಪಕ್ರಮದಲ್ಲಿ ಯೋಜನಾಧಿಕಾರಿ (ಶಿಕ್ಷಣ). ಇವರನ್ನು: hydermehdi.rizvi@akdn.org ನಲ್ಲಿ ಸಂಪರ್ಕಿಸಬಹುದು.

ಅನುವಾದ: **ರೋಹಿಣಿ ಮುಂಡಾಜೆ** । ಪರಿಶೀಲನೆ: **ಲತಾ ಕೆ. ಸಿ**